ಗಂಗಾವತಿ ವಿಚಾರದಲ್ಲಿ ಎರಡು ವಿಚಾರದಲ್ಲಿ, ಸರ್ಕಾರ ತೆಗೆದುಕೊಂಡಿರತಕ್ಕಂತಹ ಕ್ರಮಗಳನ್ನು ಈ ಸದನದ ಮುಂದೆ ಇಡುತ್ತಿದ್ದೇನೆ. ಚಿಂಚೋಳಿಯಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿರತಕ್ಕಂತಹ ವಿಚಾರದಲ್ಲಿ ಸ್ವಲ್ಪ ಸತ್ಯವಿದೆ. ನಾನು ವಲಯದ ಡಿ.ಐ.ಜಿ.ಯವರ ಜೊತೆಯಲ್ಲಿ ಮಾತನಾಡಿದ್ದೇನೆ. ಅಲ್ಲಿ ಡಿಸ್‌ಪ್ಯೂಟ್ ಇರುವುದು ಜಮೀನಿನ ಬಗ್ಗೆ. ರೆವಿನ್ಯೂ ಜಮೀನು, ಫಾರೆಸ್ಟ್ ಜಮೀನು, ಅದನ್ನು ಮಾಡುತ್ತಾ ಇರತಕ್ಕಂಥವರು ಯಾರು ಎನ್ನುವುದರ ಬಗ್ಗೆ. ಅದನ್ನು ಮಾಡುತ್ತಿರುವವರು ಲಂಬಾಣಿ ಜನಾಂಗದವರು. ಅರಣ್ಯ ಇಲಾಖೆಯವರು ಅವರನ್ನು ಹೋಗು ಎಂದು ಎಬ್ಬಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಎನ್ನತಕ್ಕಂತಹ ವಿಚಾರ. ಮತ್ತು ಲಂಬಾಣಿ ಜನಾಂಗದ ಕೆಲವು ಜನರ ಮೇಲೆ ಆಗಿರತಕ್ಕಂತಹ ದೌರ್ಜನ್ಯ ಬಗ್ಗೆಯೂ ಸಹ ಮಾನ್ಯ ಸದಸ್ಯರು ಇವತ್ತು ಪ್ರಸ್ತಾಪ ಮಾಡಿದ್ದಾರೆ. ಅವರು ಕಂಪ್ಲೆಂಟ್ ಕೊಟ್ಟಿರತಕ್ಕಂಥದ್ದು ಒಬ್ಬ ಡಿ.ಎಫ್.ಓ. ಹೆಣ್ಣು ಮಗಳೇ, ಆಕೆ ಅಲ್ಲಿದ್ದು ಅದನ್ನೆಲ್ಲ ಮಾಡಿದ್ದಾಳೆಂದು. ಆದ್ದರಿಂದ ಅರಣ್ಯ ಇಲಾಖೆ ಮತ್ತು ರೆವಿನ್ಯೂ ಇಲಾಖೆಯ ಅಧಿಕಾರಿಗಳು ಇಬ್ಬರು ತಪ್ಪಿತಸ್ಥರ ಸ್ಥಾನದಲ್ಲಿರುವುದರಿಂದಾಗಿ, ವಲಯದ ಡಿ.ಐ.ಜಿ.ಯವರ ಜೊತೆಯಲ್ಲಿ ನಾನೇ ಖುದ್ದಾಗಿ ಮಾತನಾಡಿ, ಅಲ್ಲಿಯ ಶಾಸಕರು ನಮ್ಮ ಸಹೋದ್ಯೋಗಿಯಾದಂತಹ ಶ್ರೀ ವೈಜನಾಥ ಪಾಟೀಲ್‌ರವರು ಈ ವಿಚಾರದಲ್ಲಿ ಒಂದು ವಾರದ ಹಿಂದೆಯೇ ಹೇಳಿದ್ದಾರೆ. ಈಗಾಗಲೇ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಂಡಿದೆ. ಇದರ ಬಗ್ಗೆ ವಿಚಾರಣೆ ನಡೆಸುತ್ತದೆ. ದೌರ್ಜನ್ಯವಾಗಿದೆ ಎನ್ನುವುದು ನಮಗೆ ಸ್ವಲ್ಪ ಮೇಲ್ನೋಟಕ್ಕೆ ಕಂಡರೂ ಸಹಿತ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂತಹ ಭರವಸೆಯನ್ನು ಕೊಡುವುದರ ಜೊತೆಗೆ ನ್ಯಾಯಯುತವಾಗಿ ಅದು ಏನಾಗಬೇಕೊ ಅದನ್ನು ಬಗೆಹರಿಸುತ್ತೇವೆ. ಇದು ಚಿಂಚೋಳಿಯ ವಿಚಾರದಲ್ಲಿ. ಇನ್ನು ಗಂಗಾವತಿಯ ವಿಚಾರದಲ್ಲಿ ಇರತಕ್ಕಂಥದ್ದು ಜಮೀನಿನ ವಿಚಾರದಲ್ಲಿ ಮತ್ತೊಂದು ಅಲ್ಲಿ ರೈಲ್ವೆ ಸ್ಟೇಷನ್ ಪಕ್ಕದಲ್ಲಿರತಕ್ಕಂತಹ...

ಅಧ್ಯಕ್ಷರು:- ಪ್ರಶ್ನೆಗಳು ಬೇಡ. ನೀವು ಆಮೇಲೆ ಅದನ್ನು ಮಾಡಿಕೊಳ್ಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ನೋಡಿ ನನ್ನ ಹತ್ತಿರ ದಾಖಲೆ ಇದೆ. ದಯವಿಟ್ಟು ಕುಳಿತುಕೊಳ್ಳಿ ಶ್ರೀರಾಮರೆಡ್ಡಿಯವರೇ, ನಾನು ಮಾತನಾಡುತ್ತೇನೆ. ಅಲ್ಲಿ ಪಕ್ಕದಲ್ಲಿರತಕ್ಕಂತಹ ಜಮೀನಿನ ವಿವಾದದಲ್ಲಿ ಎರಡು ಹರಿಜನ ಗುಂಪಿನವರ ನಡುವೆಯಾಗಿರತಕ್ಕಂತಹ ಸಮಸ್ಯೆ. ಸಿ.ಪಿ.ಎಂ.ಪಾರ್ಟಿಯ ಕಾರ್ಯದರ್ಶಿಯವರು ಇವತ್ತು ಬೆಳಿಗ್ಗೆ ನನ್ನನ್ನು ಭೇಟಿ ಮಾಡಿದ್ದರು. ಎಲ್ಲಾ ವಿವರಗಳನ್ನು ಸಹಿತ ನಾನು ತೆಗೆದುಕೊಂಡು ಆ ವಿಚಾರದಲ್ಲಿ ವಿಚಾರಣೆಯನ್ನು ನಡೆಸಲಿಕ್ಕೆ ಡಿ.ಐ.ಜಿ.ಯವರಿಗೆ ಖುದ್ದಾಗಿ ಸೂಚನೆಯನ್ನು ನಾನು ಕೊಟ್ಟಿದ್ದೇನೆ. ವಿಚಾರಣಾ ವರದಿ ಬಂದ ಮೇಲೆ ಗೌರವಾನ್ವಿತ ಸದಸ್ಯರಿಗೆ ಅದನ್ನು ತಿಳಿಸುತ್ತೇನೆ.

(3) ಡಾ.ಶಿವರಾಮ ಕಾರಂತರ 'ಓದುವ ಆಟ' ಪುಸ್ತಕವನ್ನು ಹಿಂದಕ್ಕೆ ಪಡೆದಿರುವುದು.

ಡಾ|| ಜೀವರಾಜ ಆಳ್ವ:- ಮಾನ್ಯ ಅಧ್ಯಕ್ಷರೇ, ಲೋಕ ನಾಯಕರಾದ ಜಯಪ್ರಕಾಶ ನಾರಾಯಣ್‌ರವರು ಹುಟ್ಟುಹಾಕಿದಂತಹ ಜನತಾ ಪಕ್ಷ, ಜನತಾ ದಳ ಸರ್ಕಾರ ಅಧಿಕಾರದಲ್ಲಿದೆ. ಮಹಾಚೈತ್ರವಾಯಿತು ಸುಮ್ಮನೆ ಕುಳಿತೆವು. ನನಗೆ ನೋವು ಏನು ಎಂದು ಹೇಳಿದರೆ, ಅತ್ಯಂತ ದೊಡ್ಡ ವಿಚಾರವಾದಿ, ಸಾಂಸ್ಕೃತಿಕ ನೆಲೆಗಟ್ಟಿನ ಬಗ್ಗೆ ಅತ್ಯಂತ ಕಟುವಾದಂತಹ ಅಭಿಪ್ರಾಯ ಇರುವಂತಹ ಶ್ರೀ ಜೆ.ಹೆಚ್.ಪಟೇಲರು, ಉಪ ಮುಖ್ಯಮಂತ್ರಿ, ವೈಜನಾಥ್ ಪಾಟೀಲರವರು, ಲಲಿತಾನಾಯಕ್, ನಾಣಯ್ಯನವರು, ಮಂಜುನಾಥರವರು,

ಎಂ.ಪಿ. ಪ್ರಕಾಶ್‌ರವರು ಇಷ್ಟು ಜನ ಸಚಿವ ಸಂಪುಟದ ಸಭೆಯಲ್ಲಿದ್ದುಕೊಂಡು ಇವತ್ತು ಓದುವ ಆಟ ಪುಸ್ತಕವನ್ನು ವಿತ್‌ಡ್ರಾ ಮಾಡಿದ್ದಾರೆಂದು ನನಗೆ ಸೂಚನೆ ಬಂದಿದೆ. ಇದರ ಬಗ್ಗೆ ಶೈಕ್ಷಣಿಕವಾಗಿ there must be an academic debate ಮಹಾ ಚೈತ್ರದ ಬಗ್ಗೆಯೂ ಮಾತನಾಡೋಣ. ಓದುವ ಆಟದ ಬಗ್ಗೆಯೂ ಮಾತನಾಡೋಣ. ತಮ್ಮ ಮೂಲಕ ಉಪ ಮುಖ್ಯ ಮಂತ್ರಿಗಳಿಗೆ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಸುಮಾರು ಅರ್ಧ ಗಂಟೆ ಏಕೆಂದರೆ there are vested interests ಇದು ಶ್ರೀ ಶಿವರಾಮಕಾರಂತರ ಸ್ವಾಭಿಮಾನದ ಪ್ರಶ್ನೆಯಲ್ಲ. ಅಥವಾ ಶಿವಪ್ರಕಾಶ್‌ರವರದು ಅಲ್ಲ. ಆದರೆ ಒಂದು ಸ್ವಾತಂತ್ರ್ಯ constitutional right ಎಂದು ಹೇಳುತ್ತಾರೆ. ಇದಕ್ಕೆ ಧಕ್ಕೆಯಾಗುವಂತಹ ಕೆಲಸವನ್ನು ಜನತಾ ದಳದ ಸರ್ಕಾರ ಮಾಡಿದೆ, ಈ ವಿಚಾರದಲ್ಲಿ ಎಡವಿದ್ದಾರೆ ಸರಿಪಡಿಸಿಕೊಳ್ಳಲಿ ಎಂದು ಹೇಳಿಕೊಂಡು, ಒಂದು ಅರ್ಧಗಂಟೆ ಸಮಯ ಕೊಡಬೇಕು. ಈ ವಿಷಯದ ಬಗ್ಗೆ ಈಗಾಗಲೇ ಉತ್ತರವನ್ನು ಕೊಡುತ್ತೇನೆಂದು ಹೇಳುವುದಕ್ಕೆ ಆಗುವುದಿಲ್ಲ. ತಮ್ಮಲ್ಲಿ ಅತ್ಯಂತ ವಿಶ್ವಾಸ ಪೂರ್ವಕವಾಗಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಅದು ಅರ್ಧಗಂಟೆ ತಾವು ಸಮಯ ಕೊಡಬೇಕು, ಚರ್ಚೆ ನಡೆಯಲಿ, ಶ್ರೀ ಜೆ.ಹೆಚ್.ಪಟೇಲ್‌ರು ಮಾತನಾಡಲಿ, ಶ್ರೀ ಹೆಚ್.ಎನ್.ನಂಜೇಗೌಡರು ಶ್ರೀ ಯಡಿಯೂರಪ್ಪನವರು ಎಲ್ಲರೂ ಪೂರ್ಣವಾಗಿ ಮಾತನಾಡಲಿ, ಪ್ರತಿಯೊಬ್ಬ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಮಂಡಿಸಲಿ, ಶ್ರೀ ವಾಟಾಳ್ ನಾಗರಾಜ್‌ರವರು ಸಹಿತ ಮಾತನಾಡಲಿ. ಏಕೆಂದರೆ ಬರೀ ಒಂದು ಪವಿತ್ರ ಪ್ರೇತ, ಕಿಟ್ಟಲ್ dictionaryಯಲ್ಲಿ ಸ್ಪಿರಿಟ್ ಎಂದರೆ ಪ್ರೇತ ಎಂದು ಬರುತ್ತದೆ. ಲಟ ಪಟ ಆಚಾರಿ ಪವಿತ್ರ ಪ್ರೇತ ಎನ್ನುವ ಎರಡು ಪದಗಳಿಗೋಸ್ಕರವಾಗಿ ಬರೀ ಈ ಜನತಾ ದಳದ ಸರ್ಕಾರ ಎರಡು ಪಠ್ಯಪುಸ್ತಕಗಳನ್ನು ವಿತ್ ಡ್ರಾ ಮಾಡಿಲ್ಲ. ಆ ಐದು ಪಠ್ಯ ಪುಸ್ತಕಗಳನ್ನು ವಿತ್ ಡ್ರಾ ಮಾಡಿದ್ದಾರೆ. There is a deliberate attempt by a publishing House. ಒಬ್ಬ ವ್ಯಕ್ತಿ ಇದನ್ನು ಕೋರ್ಟ್‌ನಲ್ಲಿಯೂ ಕೇಸ್ ಹಾಕಿದ್ದಾನೆ, ಅದನ್ನು ಮುಂದುವರಿಸಿಕೊಂಡು ಹೋಗಿದ್ದಾನೆ. ಯಾವುದೇ ಕಮಿಟಿಯಾಗಲಿ, ವೈಜ್ಞಾನಿಕವಾಗಿ, ಶೈಕ್ಷಣಿಕವಾಗಿ, ವಿಧಾನ ಸಭೆಯಲ್ಲಿ ಚರ್ಚೆ ಮಾಡಲಿ, ಇನ್ನು ಇವರನ್ನು ಹೇಗೆ ನಂಬುವುದು. ಮಹಾಚೈತ್ರವಾಯಿತು, ಓದುವ ಆಟ ಪುಸ್ತಕವಾಯಿತು, ನಾಳೆ ಕುವೆಂಪುರವರ ಯಾವುದಾದರೂ ಪುಸ್ತಕವನ್ನು ಬ್ಯಾನ್ ಮಾಡುತ್ತಾರೋ ಎನ್ನುವ ಹೆದರಿಕೆ ನನಗೆ ಉಂಟಾಗಿದೆ. ಆದ್ದರಿಂದ ಆಗಿರುವುದನ್ನು ನಾನು ಹೇಳುತ್ತಿರುವುದು. ಮಹಾಚೈತ್ರ ಅಥವಾ ಶ್ರೀ ಜೆ.ಹೆಚ್.ಪಟೇಲರೇ ಅದನ್ನು ನಿಮ್ಮ ಆತ್ಮ ಸಾಕ್ಷಿಯಾಗಿ ನೀವು ಒಪ್ಪುತ್ತೀರೋ ಓದುವ ಆಟ ಮಾಡಿದ ಹಾಗೆ.. ಅಲ್ಲ ವಿಶ್ವವಿದ್ಯಾನಿಲಯ ಹೇಗೆ ಮಾಡುತ್ತದೆ? University is accountable ಅದು ಯಾರೋ ಹೇಳಿದರು autonomous body ಸ್ವಾಯತ್ತ ಸಂಸ್ಥೆಯೆಂದು, Sir, as long as it is the recipient of the funds of the people, it is accountable to the Legislature, it is accountable to the Government. ಏನೋ ಗುಲ್ಬರ್ಗಾ ವಿಶ್ವವಿದ್ಯಾನಿಲಯದವರು ಮಾಡಿದರು ಎಂದು ಹೇಳಿ ಅದರ ಹೆನ್ನೆಲೆಯನ್ನು ತೆಗೆದುಕೊಳ್ಳಬೇಡಿ. ಅನ್ಯಾಯ ನಡೆದಿದೆ; ಆಘಾತ ನಡೆದಿದೆ ಅದನ್ನು ಸರಿಪಡಿಸಬೇಕು. ಮಹಾಚೈತ್ರ, ಓದುವ ಆಟ ಇದಕ್ಕೆ ತಾವು ಏನು ಹೇಳುತ್ತೀರೀ ನೀವೇ ಹೇಳಿ. ಸಚಿವ ಸಂಪುಟದಲ್ಲಿ ಸಭೆಯಲ್ಲಿ ಬ್ಯಾನ್ ಮಾಡಿದ್ದೇವೆ ಎಂದು ಅದನ್ನು ನೀವು ತೆಗೆದುಕೊಳ್ಳುತ್ತೀರ? ವಿತ್ ಡ್ರಾ ಮಾಡಿದ್ದೀವೆ ಎಂದು

ತೆಗೆದುಕೊಳ್ಳುತ್ತೀರೋ?

ಶ್ರೀ ಜೆ.ಹೆಚ್.ಪಟೀಲ್(ಉಪ ಮುಖ್ಯಮಂತ್ರಿ):- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪೋಣ ಚರ್ಚೆ ಮಾಡೋಣ. ಬ್ಯಾನ್ ಮಾಡೋಣ ಅಥವಾ ಸಾಹಿತ್ಯಿಕ ಸಾಂಸ್ಕೃತಿಕ ಅದರಲ್ಲಿ ಇರತಕ್ಕಂತಹ ಅಂಶಗಳು ಏನು? ಸದನದಲ್ಲಿ ಅದನ್ನು ಚರ್ಚೆ ಮಾಡಬಹುದು, ಯಾವುದು ಮಾಡಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಆ ಪುಸ್ತಕಗಳನ್ನು ವಿತ್‌ಡ್ರಾ ಮಾಡಿದ್ದೇವೆ. ಬ್ಯಾನ್ ಮಾಡಿಲ್ಲ ಎರಡು ಪುಸ್ತಕಗಳನ್ನು..

ಡಾ॥ ಜೀವರಾಜ ಆಳ್ವ:- ಎರಡು ಪುಸ್ತಕಗಳಲ್ಲ, ಐದು ಪುಸ್ತಕಗಳನ್ನು ಮಾಡಿದ್ದಾರೆ. ಏಕೆ ಎಂದು ಹೇಳಿದರೆ, ಕರ್ನಾಟಕ ರತ್ನ ಎಂದು ಕೊಟ್ಟಿರತಕ್ಕಂತಹ ಬಿರುದನ್ನು ಶ್ರೀ ಶಿವರಾಮ ಕಾರಂತರು ಅತ್ಯಂತ ನೋವಿನಿಂದ ಹಿಂತಿರುಗಿಸಿದ್ದಾರೆ. ಇದು ಅತ್ಯಂತ ಗಹನವಾದಂತಹ ಪ್ರಶ್ನೆ ಇದು ಶಿವಪ್ರಕಾಶ್‌ರವರಿಗೆ, ಶ್ರೀ ಶಿವರಾಮ ಕಾರಂತರಿಗೆ ಮೀಸಲಾಗಿ ಇಟ್ಟಿಲ್ಲ. ಪ್ರತಿಯೊಂದು ಆ ಸಾಂಸ್ಕೃತಿಕ, ಆ ಆಯಾಮದ ಒಳಗೆ ನುಗ್ಗುತ್ತಿದ್ದೀರಿ, it is an assault on the freedom of press ಆದ್ದರಿಂದ ಅರ್ಧ ಗಂಟೆ ಯಾವತ್ತಾದರೂ ಇದರ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡೋಣ. ಏಕೆಂದರೆ ಇನ್ನೊಂದು ಸಲ ಈ ರೀತಿಯ ಘಟನೆಯು ನಡೆಯಬಾರದು. ಅದು ನಾಟಕದಲ್ಲಿಯೇ ಆಗಲಿ ಯಾವುದೇ ಕ್ಷೇತ್ರದಲ್ಲಿ ಆಗಲಿ ಸಾಹಿತ್ಯದಲ್ಲಿ ಆಗಲಿ, ಅಥವಾ freedom of the press. ತಮಗೆ ನೆನಪು ಇರಬಹುದು ಅಧ್ಯಕ್ಷರೇ, ಶ್ರೀ ಜಯಪ್ರಕಾಶ್ ನಾರಾಯಣ್‌ರವರ ಹೆಸರಿನಲ್ಲಿ ಒಂದು ಸಲ ನನ್ನನ್ನು ಕೂರಿಸಿಬಿಟ್ಟಿರಿ. ಆದ್ದರಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ಒಂದು ಚರ್ಚೆಗೆ ಸಂಪೂರ್ಣ ಗ್ರಾಸ್ ಆಗಬೇಕು. ಇದರ ಬಗ್ಗೆ ಒಂದು ಅರ್ಧ ಗಂಟೆ ಅವಕಾಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಟಿ.ಲಲಿತಾನಾಯಕ್:- ದಯವಿಟ್ಟು ಚರ್ಚೆ ಮಾಡುವುದಾದರೆ, ಎಲ್ಲರೂ ಎಲ್ಲವನ್ನು ಓದಿಕೊಂಡು ಬಂದೇ ಚರ್ಚೆ ಮಾಡಬೇಕೆಂದು ಕರಾರು ಹಾಕಿ. ಸುಮ್ಮನೆ ಕೆಲವರು ಹಾಗೆಯೇ ಮಾತನಾಡಬಹುದು. ಆ ಎರಡೂ ಪುಸ್ತಕಗಳನ್ನು ಓದಿಕೊಂಡು ಬರಬೇಕು.

ಅಧ್ಯಕ್ಷರು:-ಅವರು ಒಂದು ಸಲಹೆ ಕೊಟ್ಟಿದ್ದು ನೀವು ಓದಿಕೊಂಡು ಬರಬೇಕೆಂದು, ನಿಮಗೆ ಟೈಮ್ ಎಲ್ಲಿದೆ. ಅವರ ಸಲಹೆ ನೀವು ಓದಬೇಕೆಂದು, ನೀವು ಓದದೆ ಇದ್ದರೂ ನಾನು ರೆಡಿಯಾಗಿ ಬರುತ್ತೇನೆ. ನೀವು ಏಕೆ ಯೋಚಿಸುತ್ತೀರಿ?

ಡಾ,ಜೀವರಾಜ ಆಳ್ವ:- ಆಯಿತು ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಶ್ರೀ ಜೀವರಾಜ ಆಳ್ವರವರು, ಬಹಳ ಮೂಲ ಭೂತವಾದಂತಹ ಅತ್ಯಂತ ಮುಖ್ಯವಾದ ವಿಷಯವನ್ನು ಎತ್ತಿದ್ದಾರೆ. ನಾವು ಇದನ್ನು ಇಲ್ಲಿ ಚರ್ಚೆ ಮಾಡತಕ್ಕಂಥದ್ದು ಅವಶ್ಯಕತೆ ಇದೆ ಎಂದು ಅವರ ಮಾತಿಗೆ ಬೆಂಬಲವನ್ನು ಜೋಡಿಸುತ್ತೇನೆ. ಆದರೆ ಹಿಂದೆ ತಮಗೆ ಗೊತ್ತಿರುವ ಹಾಗೆ. ಈ ಜನತಾ ದಳ ಸರ್ಕಾರ ಬಂದಮೇಲೆ ಬಹುಶಃ ಹಿಂದೆ ಇದ್ದಂತಹ ಸರ್ಕಾರಗಳು ಈ ರೀತಿಯ ಪುಸ್ತಕಗಳನ್ನು ಹಿಂದಕ್ಕೆ ತೆಗೆದುಕೊಂಡಿರತಕ್ಕಂಥದ್ದು ನನ್ನ ಗಮನಕ್ಕೆ ಬರಲಿಲ್ಲ, ಅಥವಾ ಬಂದಿದ್ದರೆ ತಿಳಿಸಿ. ಹಿಂದೆ ಬಹಳ ಜನ ಸಾಹಿತಿಗಳು ಬರೆದಿರತಕ್ಕಂತಹ ಪುಸ್ತಕಗಳನ್ನೆಲ್ಲ ನಾವು ಹಿಂದಕ್ಕೆ ಪಡೆದಿದ್ದೇವೆ ಹಿಂದೆ ಪಡೆದಿರತಕ್ಕಂತಹ ಸರ್ಕಾರಗಳು ಹೇಳಿದರೆ ಅಥವಾ ತಾವು ತಿಳಿಸಿ ನನ್ನ ಗಮನಕ್ಕೆ ಬಂದಿಲ್ಲ. ನಿಮ್ಮ ಸರ್ಕಾರ ಬಂದ ಮೇಲೆ ಒಂದು ಮಹಾಚೈತ್ರವನ್ನು ಹಿಂದಕ್ಕೆ ತೆಗೆದುಕೊಂಡಿದ್ದೀರಿ. ಅದರ ಬಗ್ಗೆ

ಪರ ವಿರುದ್ಧ ಮಾತನಾಡುವುದಕ್ಕೆ ಹೋಗುವುದಿಲ್ಲ. ನೀವೇ ನಿಮ್ಮ ಸರ್ಕಾರ ಒಂದು ನಿರ್ಧಾರ ನಿಮ್ಮ ಸಚಿವ ಸಂಪುಟ, ತಾವೇ ಇನ್ನು ಯಾರನ್ನು ಕೇಳಬೇಕಾಗಿಲ್ಲ. ಸಭೆ ಇದೆ, ಈ ಸಭೆಯಲ್ಲಿ ಚರ್ಚೆ ಮಾಡಬೇಕು, ಅಥವಾ ಬೇರೆ ಕಡೆ ಕರೆದು ಮಾತನಾಡಬೇಕು. ಏನು ಯಾವುದೂ ಹೇಳದೆ ಕೇಳದೆ ನೀವು ಹಿಂದೆ ಪಡೆಯತಕ್ಕದ್ದು ಒಂದಾಯಿತು. ಮತ್ತೆ ಶ್ರೀ ಶಿವರಾಮ ಕಾರಂತರದ್ದು ಹಿಂದೆ ಪಡೆದಿದ್ದೀರಿ. ನಾನು ಅದರ ಪರ, ವಿರುದ್ಧ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಸಭೆಯಲ್ಲಿ ಇಂಥದ್ದೆಲ್ಲ ಚರ್ಚೆಯಾಗಬೇಕು. ಚರ್ಚೆಯಾಗದೆ ಏಕಾಏಕಿಯಾಗಿ ಅದನ್ನು ಹಿಂದೆ ಪಡೆಯತಕ್ಕ ಪ್ರವೃತ್ತಿ ಏನಿದೆ ಅದು ಒಳ್ಳೆಯದಲ್ಲ. ಅದು ಒಳ್ಳೆಯ ಸಂಪ್ರದಾಯವು ಅಲ್ಲ. ಅದನ್ನು ನಾವು ರದ್ದು ಮಾಡಿಲ್ಲ. ಹಿಂದೆ ಪಡೆದಿದ್ದೇವೆಂದರೆ ಎರಡೂ ಒಂದೇ ಸ್ವಲ್ಪ ಹೆಚ್ಚು ಕಡಿಮೆ. ಅಲ್ಲದೆ ಇನ್ನೇನು? ಅದರ ಅರ್ಥವೇನು?

ಅಧ್ಯಕ್ಷರು:- ಚರ್ಚೆಗೆ ತೆಗೆದುಕೊಳ್ಳೋಣ, ಚರ್ಚೆ ಮಾಡೋಣ.

ಒಬ್ಬ ಮಾನ್ಯ ಸದಸ್ಯರು:- ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ. ಎಲ್ಲಾ ಶಾಸಕರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ತಾವು ಚರ್ಚೆಗೆ ಅವಕಾಶ ಕೊಡಿ. ಈಗಾಗಲೇ ಅವರು ಮನನೊಂದು ತಾವು ಕೊಟ್ಟಿರತಕ್ಕ ಎಲ್ಲಾ ಗೌರವಗಳನ್ನು ಹಿಂದಿರುಗಿಸಿದ್ದಾರೆ.

ಅಧ್ಯಕ್ಷರು:ಚರ್ಚೆಗೆ ತೆಗೆದುಕೊಳ್ಳುತ್ತೇವೆ. ಆದ್ದರಿಂದ ಇದನ್ನು ಇಲ್ಲಿಗೆ ಬಿಟ್ಟು ಬಿಡೋಣ. ಈಗ ಪುಟ್ಟಣ್ಣಯ್ಯನವರು.

ಶ್ರೀ ವಾಟಾಳ್ ನಾಗರಾಜ್: ನನ್ನ ಪ್ರಶ್ನೆ, ತಾವು ಚರ್ಚೆ ಮಾಡುವುದಕ್ಕೆ ಒಂದು ಅವಕಾಶ ಮಾಡಿಕೊಡಿ ಚರ್ಚೆ ನಡೆಯಲಿ.

4. ಉರ್ದು ಗಲಾಟೆಯಲ್ಲಿ ಪ್ರೊ.ನಂಜುಂಡಸ್ವಾಮಿಯವರ ಕಾರು ಸುಟ್ಟು ಹೋಗಿರುವುದಕ್ಕೆ ಪರಿಹಾರ

ಶ್ರೀ ಕೆ.ಎನ್.ಪುಟ್ಟಣ್ಣಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಪ್ರೊ:ನಂಜುಂಡಸ್ವಾಮಿಯವರ ಕಾರು ಉರ್ದು ಗಲಾಟೆಯಲ್ಲಿ ಸುಟ್ಟುಹೋಯಿತು. ಆಗ ಅಲ್ಲಿ ಯಾವುದೇ ಪೋಲೀಸ್ ವ್ಯವಸ್ಥೆಯಾಗಲಿ ಯಾವುದೇ ರಕ್ಷಣೆಯಾಗಲಿ ಇರಲಿಲ್ಲ. ಒಂದು ದೊಡ್ಡ ಮಾಬ್ ಇತ್ತು. ಗಲಾಟೆಯಲ್ಲಿ ಕಾರು ಸುಟ್ಟು ಹೋಗಿ ಸುಮಾರು ಹತ್ತು ತಿಂಗಳಾಯಿತು. ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಮಾನ್ಯ ಗೃಹ ಮಂತ್ರಿಗಳಿಗೆ ಲಿಖಿತ ಮೂಲಕ ತಂದಿದ್ದೇನೆ; ಅವರ ಗಮನಕ್ಕೂ ತಂದಿದ್ದೇನೆ. ಅವರು ಹೇಳಿದರು, ಮುಖ್ಯ ಮಂತ್ರಿಗಳ ಟೇಬಲ್‌ನಲ್ಲಿ ವಿಷಯ ಇದೆ, ಅವರು ಏನು ತೀರ್ಮಾನ ಮಾಡುತ್ತಾರೆಂದು ನೋಡಬೇಕು, ಇನ್ನೂ ಕಾಲಾವಕಾಶ ಬೇಕಾಗುತ್ತದೆಂದು ಹೇಳಿ 3-4 ತಿಂಗಳಾಯಿತು ಅವರು ನಾವು ಮಾತನಾಡಿ. ಆದ್ದರಿಂದ ಅದರ ಬಗ್ಗೆ ಸರ್ಕಾರದ ನಿಲುವು ಏನು? ಸರ್ಕಾರ ಏತಕ್ಕೆ ಕಾಲ ವಿಳಂಬ ಮಾಡುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಅದಕ್ಕೆ ಸಮಂಜಸವಾದ ಉತ್ತರವನ್ನು ಮಾನ್ಯ ಗೃಹ ಮಂತ್ರಿಗಳು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:- ಈ ಬಗ್ಗೆ ಸರ್ಕಾರಕ್ಕೆ ಅನೇಕ ಮನವಿಗಳನ್ನು ನಾವು ಸಲ್ಲಿಸಿದ್ದೇವೆ. ಅವರು ಬೇಡಿಕೊಂಡು ಕಾಡಿಕೊಂಡು ನನ್ನ ಕಾರು ಸುಟ್ಟುಹೋಗಿದೆ, ಪರಿಹಾರ ಕೊಡಿ, ನನಗೆ ಹಣ ಕೊಡಿ ಎಂದು ಕೇಳಲಿಲ್ಲ. ಅದು ನಮ್ಮ ಕರ್ತವ್ಯ. ಸರ್ಕಾರದ ಕರ್ತವ್ಯ.